# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಎಸ್.ಟಿ. ಬಸವರಾಜಪ್ಪ | **ಪಿಡಬ್ಲ್ಯೂ.15** |
| **ತಂದೆಯ ಹೆಸರು** | : | ತಿಮ್ಮಪ್ಪ | **ಸಿಡಬ್ಲ್ಯೂ.35** |
| **ವಯಸ್ಸು** | : | **60 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರಿಯೂರು | **ದಿನಾಂಕ: 11.12.2018** |
| **ವಾಸಸ್ಥಳ** | : | ಎಸ್.ಎಸ್. ಲೇಔಟ್, ದಾವಣಗೆರೆ | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ದಿಃ 14.01.2015 ರಿಂದ 01.07.2015 ರವರೆಗೆ ನಾನು ಹಿರಿಯೂರಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಂತ ಕರ್ತವ್ಯ ನಿರ್ವಹಿಸುತ್ತಿದ್ದೆನು . ಆ ಸಮಯದಲ್ಲಿ ದಿಃ **20.08.2014** ರಂದು ಲೋಕಾಯುಕ್ತ ಪೊಲೀಸರು ನಮ್ಮ ಕಛೇರಿಗೆ ಪತ್ರ ಬರೆದು ಹಿರಿಯೂರು ತಾಲ್ಲೂಕು ಈಶ್ವರಗೇರಿ ಗ್ರಾಮದ ಸರ್ವೆ ನಂ **126/4** ಕ್ಷೇತ್ರ **2** ಎಕೆರ **11** ಗುಂಟೆ ಜಮೀನಿನಲ್ಲಿರುವ ಕೊಳವೆ ಬಾವಿ ಎಷ್ಟು **,** ಅದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ **,** ತಂತಿ ಬೇಲಿ ಎಷ್ಟು ಖರ್ಚು ಮಾಡಿದ್ದಾರೆ ಅಂತ ವಿವರ ಕೇಳಿದ್ದರು . ಆ ಪತ್ರವನ್ನು ನಿಪಿ–**26** ಅಂತ ಗುರುತಿಸಲಾಯಿತು . ಸದರಿ ಪತ್ರದ ಪ್ರಕಾರ ನಾನು ದಿಃ **27.02.2015** ರಂದು ಸರ್ವೆ ನಂ **126/4** ಜಮೀನಿಗೆ ಭೇಟಿ ಕೊಟ್ಟು ಅಲ್ಲಿ ಪರಿಶೀಲಿಸಲಾಗಿ ಒಟ್ಟು **3** ಕೊಳವೆ ಬಾವಿ ಇದ್ದುದು ಕಂಡು ಬಂದಿತು . ಅಲ್ಲದೇ **2** ಎಕರೆ **11** ಗುಂಟೆ ಜಮೀನಿನ ಸುತ್ತಲೂ **5** ಅಡಿ ಎತ್ತರದ ಕಲ್ಲಿನ ಕಂಬ ಉಪಯೋಗಿಸಿ ಸುತ್ತಲೂ ತಂತಿ ಬೇಲಿ ಅಳವಡಿಸಿದ್ದು ಕಂಡು ಬಂದಿತು . ಅವುಗಳ ಖರ್ಚನ್ನು **2015** ರ ಪ್ರಕಾರ ಲೆಕ್ಕಚಾರ ಮಾಡಲಾಗಿ ಈ ಕೆಳಕಂಡಂತೆ ಮೊತ್ತ ಕಂಡು ಬಂದಿರುತ್ತದೆ .

| ಕ್ರ. ಸಂ. | ಖರ್ಚು ಮಾಡಿದ ಬಾಬತ್ತು ವಿವರ | ಖರ್ಚು ರೂಪಾಯಿ |
|---|---|---|
| 1 | 3 ಬೋರ್ ವೆಲ್ ಹಾಕಿದ ಬಗ್ಗೆ ಖರ್ಚು | 47,225/- |
| 2 | 2 ಎಕರೆ 11 ಗುಂಟೆ ಜಮೀನಿನ ಸುತ್ತಲೂ ಕಲ್ಲಿನ ಕಂಬ , ತಂತಿ ಬೇಲಿ | 90,240/- |
| 3 | ಬೆಸ್ಕಾಂ ಠೇವಣಿ | 50,000/- |
| | ಒಟ್ಟು | 1,87,465/- |

ಈ ಬಗ್ಗೆ ನಾನು ಒಂದು ವರದಿ ಕೊಟ್ಟಿರುತ್ತೇನೆ . ಅದನ್ನು ನಿಪಿ–27 ಅಂತ ಗುರುತಿಸಲಾಯಿತು . ಆ 3 ಕೊಳವೆ ಬಾವಿ ಪೈಕಿ ಒಂದು ಕೆಲಸ ಮಾಡುತ್ತಿತ್ತು , ಉಳಿದ 2 ಕೊಳವೆ ಬಾವಿ ವಿಫಲವಾಗಿದ್ದವು . ಹೀಗಾಗಿ ಕಡಿಮೆ ಮೊತ್ತ ಆಗಿದೆ . ಸರ್ವೆ ನಂ . 126/4 ಇದು ಆರೋಪಿ ಸಹೋದರ ರಾಮಣ್ಣನ ಹೆಸರಿನಲ್ಲಿರುತ್ತದೆ . ಈ ಬಗ್ಗೆ ನಾನು ಲೋಕಾಯುಕ್ತ ಪಿ.ಐ. ಇವರಿಗೆ ಪತ್ರ ಬರೆದಿರುತ್ತೇನೆ. ಅದನ್ನು ನಿಪಿ–28 ಅಂತ ಗುರುತಿಸಲಾಯಿತು .

## ಆರೋಪಿತರ ಪರ ಶ್ರೀ ಎಸ್.ಹೆಚ್. ವಕೀಲರಿಂದಃ ಪಾಟೀ ಸವಾಲುಃ

ಸರ್ವೆ ನಂ 126/4 ಕ್ಷೇತ್ರ 2 ಎಕರೆ 11 ಗುಂಟೆ ಆರೋಪಿ ರಾಜಣ್ಣನ ಹಿಸ್ಸೆಗೆ ಬಂದಿದೆ. ಸದರಿ ಆರೋಪಿ ಹಿಸ್ಸೆಗೆ ಬಂದಿರುವ 2 ಎಕರೆ 11 ಗುಂಟೆ ಜಮೀನಿನಲ್ಲಿ ಯಾವುದೇ ಕೊಳವೆ ಬಾವಿ , ತಂತಿ ಬೇಲಿ ಇರುವುದಿಲ್ಲ . ಆದರೆ ಆರೋಪಿ ತಮ್ಮ ರಾಮಣ್ಣನ ಜಮೀನಿನಲ್ಲಿ ಕೊಳವೆ ಬಾವಿ , ತಂತಿ ಇದೆ . ಹೀಗಾಗಿ ಮೇಲೆ ಹೇಳಿದ ಬೋರ್ ವೆಲ್ , ತಂತಿ ಬೇಲಿ ಖರ್ಚು ರೂ.1,87,465/– ಇದು ಆರೋಪಿಗೆ ಸಂಬಂಧ ಇರುವುದಿಲ್ಲ ಎನ್ನುವುದು ನಿಜ . ಸದರಿ ಖರ್ಚನ್ನು ಆರೋಪಿ ತಮ್ಮ ರಾಮಣ್ಣನ ಜಮೀನಿನಲ್ಲಿ ಖರ್ಚು ಮಾಡಲಾಗಿದೆ .

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.